INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -6, November--December, 2024,
PageNo,72-83
Peer -Reviewed, Refereed Journal

# ಅಂಬೇಡ್ಕರ್ ಅವರ ದೃಷ್ಟಿಕೋನದ ಸಂಸದೀಯ ಮಾದರಿ ಸರ್ಕಾರ

*(Ambedkar's Views of Parliamentary Model Government)*

**ಡಾ.ಎಂ.ರಾಚಪ್ಪಾಜಿ.**[1]

**ಅ**ಂಬೇಡ್ಕರ್ ಅವರು ಭಾರತ ಸಂವಿಧಾನ ರಚನಾ ಸಭೆಯಲ್ಲಿ ತಮ್ಮದೇ ಆದ ಛಾಪನ್ನು ಅಚ್ಚಳಿಯದ ರೀತಿಯಲ್ಲಿ ಮೂಡಿಸಿದ್ದಾರೆ. ಈ ನೆಲದ ಸರ್ವಜನಾಂಗದ ಹಿತಾಸಕ್ತಿಗಳನ್ನು ಹೊಂದಿರುವ ಅಂಬೇಡ್ಕರ್ ಅವರು ಒಂದು ವಿಶ್ವಶ್ರೇಷ್ಠವಾಗಿರುವ ಸಂವಿಧಾನವು ನಮ್ಮ ದೇಶಕ್ಕೆ ನೀಡಿದ್ದಾರೆ. ಅಂಬೇಡ್ಕರ್ ಅವರು ತಮಗೆ ಸಂಸತ್ತಿನ ಒಳಗೂ – ಹೊರಗೂ ಅವಕಾಶ ಮತ್ತು ಸಮಯವೂ ಸಿಕ್ಕಾಗಲೆಲ್ಲ ಅವುಗಳನ್ನು ಸಾಧ್ಯ ಮಾಡುತ್ತಲ್ಲೇ ಬಂದಿರುತ್ತಾರೆ. ಪ್ರಧಾನವಾಗಿ ಮೂಲಭೂತ ಹಕ್ಕುಗಳು ಹಾಗೂ ರಾಜ್ಯ ನೀತಿ ನಿರ್ದೇಶಕ ತತ್ತ್ವಗಳ ಬಗೆಗೆ ಬಂದಿರುವ ಪ್ರಶ್ನೆಗಳಿಗೆ ಮತ್ತು ಅನುಮಾನಗಳಿಗೆ ತಮ್ಮದೇ ಆದ ರೀತಿಯಲ್ಲಿ ಸಮರ್ಥನೆಯನ್ನು ನೀಡಿದವರು. ಅವುಗಳನ್ನು ಸಂವಿಧಾನದಲ್ಲಿ ಅಳವಡಿಸಲು ಪ್ರಧಾನ ಕಾರಣ ಕರ್ತರಾಗಿದ್ದಾರೆ. ಹಾಗೆಯೇ, ಕಾರ್ಯಪ್ರವೃತ್ತರಾಗಿರುವ ಅಂಬೇಡ್ಕರ್ ಅವರ ಮನಸ್ಸಿನಲ್ಲಿ ಮತ್ತೊಂದು ಅಂಶವು ಒಡಮೂಡುತ್ತದೆ. ಅದುವೇ ಭಾರತದಲ್ಲಿ ಯಾವ ಮಾದರಿಯ ಸರ್ಕಾರವನ್ನು ಅಳವಡಿಸಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಗಳು ನಡೆಯುತ್ತಿದ್ದವು. ಆವಾಗ ಸಂವಿಧಾನ ರಚನಾ ಸಭೆಯಲ್ಲಿನ ಬಹುತೇಕ ಸದಸ್ಯರು ಬ್ರಿಟಿಷ್ ಮಾದರಿ ಸಂಸದೀಯ ಸರ್ಕಾರ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗೆಗೆ ಸಹಮತವನ್ನು ವ್ಯಕ್ತಪಡಿಸಿದರು. ಈ ರೀತಿಯ ಸಹಮತಕ್ಕೆ ಒಳಪ್ರವೇಶಿಸಿದ ಅಂಬೇಡ್ಕರ್ ಅವರು ಭಾರತದಂತಹ ಬಹುಸಂಸ್ಕೃತಿಯಿರುವ ರಾಷ್ಟ್ರದಲ್ಲಿ ಸಂಸದೀಯ ಮಾದರಿ ಸರ್ಕಾರವು ಅಸ್ಥಿರತೆಯನ್ನು ಎದುರಿಸಬೇಕಾಗುತ್ತದೆ. ಇದೇ ಅಲ್ಲದೇ

[1]. ಅಧ್ಯಾಪಕರು,ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

ಇದರಿಂದ ರಾಷ್ಟ್ರದಲ್ಲಿನ ದುರ್ಬಲ ಹಾಗೂ ಅಲ್ಪಸಂಖ್ಯಾತ ವರ್ಗಗಳು ಬಹುಸಂಖ್ಯಾತರಿಂದ ತುಳಿತಕ್ಕೆ ಗುರಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ ಎಂಬ ಅನುಮಾನವನ್ನು ಕೂಡ ವ್ಯಕ್ತಪಡಿಸಿದರು. ಈ ಮಾದರಿಯ ಸರ್ಕಾರಿ ವ್ಯವಸ್ಥೆಯಲ್ಲಿ ಭಾರತದಲ್ಲಿನ ದುರ್ಬಲ ವರ್ಗಗಳು ಬಲಿಷ್ಠ ವರ್ಗಗಳಿಂದ ಮತ್ತೇ ದಮನಕ್ಕೆ ಹೆಚ್ಚು ಹೆಚ್ಚು ಗುರಿಯಾಗಬಹುದು ಎಂಬುವುದು ಅವರ ವಾದವಾಗಿತ್ತು. ಮತ್ತೇ ಬಹುಸಂಖ್ಯಾತ ಜಾತಿಹಿಂದೂಗಳು ಇರುವ ಭಾಗಗಳಲ್ಲಿ ಈ ಶೋಷಿತರ ಅತ್ಯಂತ ಹೀನಾಯ ಸ್ಥಿತಿಗೆ ಒಳಪಡುವ ಸಂಗತಿಗಳು ಹೆಚ್ಚಾಗಿಯೇ ಇರುತ್ತವೆ.

ಸಂಸದೀಯ ಮಾದರಿ ಸರ್ಕಾರದ ಬಗೆಗೆ ಅನುಮಾನವನ್ನು ವ್ಯಕ್ತಪಡಿಸಿರುವ ಅಂಬೇಡ್ಕರ್ ಅವರು ಇದಕ್ಕೆ ಬದಲಿಯಾಗಿ ಅಮೇರಿಕಾದ ರೀತಿಯಲ್ಲಿ ಅಧ್ಯಕ್ಷೀಯ ಮಾದರಿ ಸರ್ಕಾರದ ವ್ಯವಸ್ಥೆಯನ್ನು ಭಾರತದಲ್ಲಿಯೂ ಅಳವಡಿಸಿಕೊಳ್ಳುವ ಸಲಹೆಯನ್ನು ಸಂವಿಧಾನ ರಚನಾ ಸಭೆಗೆ ನೀಡಿರುತ್ತಾರೆ. ಆದರೆ, ಅಂಬೇಡ್ಕರ್ ಅವರ ಸಲಹೆಗೆ "ಭಾರತೀಯ ಸಂವಿಧಾನ ರಚನಾ ಸಭೆಯಲ್ಲಿ ಈ ಅಧ್ಯಕ್ಷೀಯ ಮಾದರಿ ಸರ್ಕಾರದ ವ್ಯವಸ್ಥೆಗೆ ಸಹಮತ ದೊರಕಲಿಲ್ಲ. ಈ ಸಂದರ್ಭದಲ್ಲಿ ಸ್ಥಿರತೆಯ ದೃಷ್ಟಿಯಿಂದ ಸಂಸದೀಯ ಮಾದರಿಗಿಂತ ಅಧ್ಯಕ್ಷೀಯ ಮಾದರಿ ಸರ್ಕಾರ ಹೆಚ್ಚು ಉತ್ತಮ. ಇದು ನನ್ನ ವೈಯುಕ್ತಿಕ ಅಭಿಪ್ರಾಯ ಎಂದು ಮತ್ತೊಮ್ಮೆ ಪ್ರತಿಪಾದಿಸಿದರು. ಏಕೆಂದರೆ, ಸಂಸದೀಯ ಮಾದರಿ ಸರ್ಕಾರವು ಬಹುಮತದ ಆಧಾರ ಮೇಲೆ ರೂಪುಗೊಂಡಿರುತ್ತದೆ. ಏನಾದರೂ ಬಹುಮತ ಕಳೆದುಕೊಂಡರೆ ಸರ್ಕಾರವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಆದರೆ ಅಧ್ಯಕ್ಷೀಯ ಮಾದರಿಯಲ್ಲಿ ಸ್ಥಿರತೆ ಇರುತ್ತದೆ. ಆ ಕಾರಣವಾಗಿ ಮತ್ತೇ ಇದೇ ವಿಷಯಕ್ಕೆ ಸಂಬಂಧಿಸಿದಂತೆ "ಸಂಸದೀಯ ಮಾದರಿ ಸರ್ಕಾರವೂ ಕೂಡ ಉತ್ತಮವಾದ ರೀತಿಯಾಗಿದೆ. ತುಂಬಾ ರಾಜಕೀಯ ಪಕ್ಷಗಳು ಇದ್ದಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಬಹುದು" ಎಂಬ ಈ ಅಭಿಪ್ರಾಯದೊಂದಿಗೆ ಸಂಸದೀಯ ಮಾದರಿ ಸರ್ಕಾರ ಪದ್ಧತಿಯ ಅಳವಡಿಕೆಗೆ ಒಮ್ಮತವನ್ನು ವ್ಯಕ್ತಪಡಿರುವುದು ಕಂಡುಬರುತ್ತದೆ.

ಸಂಸದೀಯ ಮಾದರಿ ಪ್ರಜಾಪ್ರಭುತ್ವದ ಬಗೆಗೆ ಎಂದು ತಮ್ಮ ದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. *"I am very gratefully attached to the parliamentary system of government"* ಅಂದರೆ, ಈ ಮಾದರಿ ಸರ್ಕಾರಿ ವ್ಯವಸ್ಥೆಯಲ್ಲಿಯೂ ದಮನಿತರು ಹಕ್ಕು ಅಧಿಕಾರಗಳನ್ನು ಚಲಾಯಿಸುವುದು. ಹಾಗೆಯೇ ಅವರು ಕೂಡ ಸ್ವಂತ ಶಕ್ತಿಯ ಮೇಲೆ ರಾಜಕೀಯ ಪಕ್ಷವನ್ನು ಕಟ್ಟಿ ಅದರ ಮೂಲಕ ರಾಷ್ಟ್ರದ ಅಧಿಕಾರ ಎಂಬ ಕೀಲಿ ಕೈಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬಹುದು ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಈ ಆಶಯವು ಇನ್ನೂ ಕೂಡ ಇಡೇರಿರುವುದಿಲ್ಲ. ಇದನ್ನು ಭಾರತದಲ್ಲಿ ದಮನಿತ ವರ್ಗಗಳು ಅರ್ಥಮಾಡಿಕೊಳ್ಳುವುದು ಅನಿವಾರ್ಯ.

ಅಂಬೇಡ್ಕರ್ ಅವರು ಸಂಸದೀಯ ಪ್ರಜಾಪ್ರಭುತ್ವವನ್ನು ಪ್ರಬಲವಾಗಿ ಸಮರ್ಥಿಸಿರುವ ಅದರ ಲಕ್ಷಣಗಳನ್ನು ಗುರುತಿಸಿದ್ದಾರೆ. ಚರ್ಚೆಯಿಂದ ಕೂಡಿದ ಸರ್ಕಾರ, ಅನುವಂಶಿಕ ಆಳ್ವಿಕೆಯ ನಿಷೇಧ, ಸಂಸತ್ತಿನಲ್ಲಿ ಜನಪ್ರತಿನಿಧಿಗಳೇ ಕಾನೂನು ರಚಿಸುವರು, ವಿರೋಧಪಕ್ಷ. ಅಂದರೆ, ಸಂಸದೀಯ ಸರ್ಕಾರ ಪದ್ಧತಿಯಲ್ಲಿ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ; ಕೂಲಂಕುಶವಾದ ಚರ್ಚೆಯ ಅನಂತರವೇ ತೆಗೆದುಕೊಳ್ಳಲಾಗುತ್ತದೆ. ಮುಕ್ತ ಚರ್ಚೆಗಳು ಮತ್ತು ಸಮ್ಮತಿಗಳು ಆ ಸರ್ಕಾರದ ಗುರುತಿನ ಚಿಹ್ನೆಗಳಾಗಿವೆ. ವಿವಾದವಿರುವ ವಿಷಯಗಳನ್ನು ಚರ್ಚಿಸಿ ಅಥವಾ ರಾಜಿ ಮೂಲಕ ಬಗೆಹರಿಸಿಕೊಳ್ಳಬಹುದು. ಆದ್ದರಿಂದ ಈ ಮಾದರಿ ಸಕಾರ ವ್ಯವಸ್ಥೆಯಲ್ಲಿ ಚರ್ಚೆಯ ಮೂಲಕವೇ ಎಲ್ಲವನ್ನೂ ಬಗೆಹರಿಸಿಕೊಳ್ಳಬೇಕು. ಆದರೆ, ಕೆಲವು ಸಂದರ್ಭಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ತಮ್ಮ ನಿಲುವುಗಳಿಗೆ ಬದ್ಧರಾಗಿ ಸಮಾಜವು ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

**ಅನುವಂಶಿಕ ಆಳ್ವಿಕೆಯ ನಿಷೇಧ** *(Prohibition of Hereditary Rule)* - ಸಂಸದೀಯ ಮಾದರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಒಂದೇ ಒಂದು ಕುಟುಂಬ ಅಥವಾ ವಂಶದವರು ಯಾವಾಗಲೂ ಅಧಿಕಾರವನ್ನು ಹೊಂದಿರುವುದು ಅದು ಕುಟುಂಬ ರಾಜಕಾರಣವಾಗುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನು ಬುಡಸಮೇತ ಕಿತ್ತುಹಾಕಲಾಗಿದೆ. ಆದ್ದರಿಂದ ಈ ಆಡಳಿತ ಪದ್ಧತಿಯಲ್ಲಿ ಅನುವಂಶಿಕ ಆಡಳಿತಕ್ಕೆ ಅವಕಾಶವೂ ಇರುವುದಿಲ್ಲ. ಆಳುವವರು ಜನರ ಇಚ್ಛೆಗೆ ಅನುಗುಣವಾಗಿ ನಿಯತಕಾಲಿಕವಾಗಿ ನಡೆಯುವ ಚುನಾವಣೆಗಳ ಮೂಲಕ ಕಾಲಕಾಲಕ್ಕೆ ಆಯ್ಕೆಯಾಗಬೇಕು. ಭಾರತ ಮತ್ತು ಬ್ರಿಟನ್ನಿನ ರಾಷ್ಟ್ರಗಳು ಈ ಸಂಸದೀಯ ಮಾದರಿಯ ಸರ್ಕಾರಿ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ. ಹೀಗೆ ಕೂಡ ಭಾರತದಲ್ಲಿ ರಾಷ್ಟ್ರಾಧ್ಯಕ್ಷರನ್ನು ಅನುವಂಶಿಯ ಆಧಾರದ ಮೇಲೆ ನೇಮಿಸಲಾಗುವುದಿಲ್ಲ. ಆದರೆ ಬ್ರಿಟನ್ನಿನಲ್ಲಿ ಅಲ್ಲಿನ ಅನುವಂಶೀಯವಾಗಿ ರಾಜ ಅಥವಾ ರಾಣಿಯು ರಾಷ್ಟ್ರದ ಪ್ರಥಮ ಪ್ರಜೆಯಾಗಿರುವುದು ಕಂಡುಬರುತ್ತದೆ. ಪ್ರಸ್ತುತದಲ್ಲಿಯೂ ಈ ಸಂಪ್ರದಾಯ ರೂಢಿಯಲ್ಲಿರುವುದನ್ನು ಕಾಣಬಹುದು.

**ಸಂಸತ್ತಿನಲ್ಲಿ ಜನ ಪ್ರತಿನಿಧಿಗಳಿಂದಲೇ ಕಾನೂನು ರಚನೆ** *(Legislation is made by the People's Representatives in Parliament)* – ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಪ್ರತಿನಿಧಿಗಳೇ ಕಾನೂನುಗಳನ್ನು ರಚಿಸುತ್ತಾರೆ. ಏಕೆಂದರೆ, ಈ ಜನಪ್ರತಿನಿಧಿಗಳು ಜನರಿಂದ ನೇರವಾಗಿ ಚುನಾಯಿತರಾಗಿದ್ದರಿಂದ ಜನರ ಬೇಕು, ಬೇಡಿಕೆಗಳ ಬಗೆಗೆ ಸ್ಪಷ್ಟವಾದ ನಿಲುವುಗಳನ್ನು ಹೊಂದಿರುತ್ತಾರೆ. ಅದೇ ರೀತಿಯಾಗಿ ಈ ಸಂಸದೀಯ ಮಾದರಿ ಸರ್ಕಾರದಲ್ಲಿ ರಾಜ್ಯದ ಮುಖ್ಯಸ್ಥನಿಗೆ ಸಲಹೆಯನ್ನು

ನೀಡುತ್ತದೆ. ಇವರು ರಚಿಸಿ ಶಾಸನಗಳು ಜನಪರವಾಗಿರಬೇಕು. ತಮ್ಮ ಹಿತಸಾಧನೆಗಾಗಿ ಇರಬೇಕು. ರಾಜ್ಯದಲ್ಲಿ ಪ್ರಗತಿದಾಯಕವಾಗಿರಬೇಕು.

**ಬಲಿಷ್ಠ ವಿರೋಧ ಪಕ್ಷ** *(A Strong Opposition Party)* – ಈ ಪ್ರಾಮುಖ್ಯವಾಗಿರುವ ಸಂಸದೀಯ ಮಾದರಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯ ಮೂಲಕ ಹೆಚ್ಚಿನ ಸಂಖ್ಯೆಗಳನ್ನು ಪಡೆದ ರಾಜಕೀಯ ಪಕ್ಷ ಅಂದರೆ, ಬಹುಮತ ಪಡೆದ ರಾಜಕೀಯ ಪಕ್ಷವೊಂದು ರಾಷ್ಟ್ರ ಅಥವಾ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿಯುತ್ತಾರೆ. ಸೋತಂತಹ ರಾಜಕೀಯ ಪಕ್ಷಗಳಲ್ಲಿ ಯಾವುದು ಹೆಚ್ಚಿನ ಸ್ಥಾನಗಳನ್ನು ಗಳಿಸಿರುತ್ತದೆಯೋ ಆ ರಾಜಕೀಯ ಪಕ್ಷವೂ ವಿರೋಧಿ ಪಕ್ಷವಾಗಿ ಕಾರ್ಯನಿರ್ವಹಿಸುತ್ತದೆ. ಅಂದರೆ ಇಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಯಶಸ್ಸಿಗೆ ಸಮರ್ಥವಾದ ವಿರೋಧ ಪಕ್ಷವೂ ಇರಬೇಕು ಎಂಬ ಅಂಶವು ಒಡಮೂಡಿಬರುತ್ತವೆ. ಏಕೆಂದರೆ, ಸಂಸದೀಯ ಮಾದರಿ ಸರ್ಕಾರದಲ್ಲಿ ಆಳುವ ಪಕ್ಷವು ತೆಗೆದುಕೊಳ್ಳುವಂತಹ ನೀತಿ–ನಿರ್ಣಯಗಳು ಸರಿಯಾಗಿ ಇಲ್ಲದೆ ಇದ್ದಾಗ, ಅದನ್ನು ಪ್ರಶ್ನಿಸುವ ಟೀಕಿಸಲು, ವಿಮರ್ಶಿಸುವ ಹಾಗೂ ಅದಕ್ಕೆ ಸಲಹೆಯನ್ನು ನೀಡುವ ಮೂಲಕ ಈ ವಿರೋಧ ಪಕ್ಷವೂ ತನ್ನ ಕರ್ತವ್ಯ ಜವಾಬ್ದಾರಿ ಹಾಗೂ ಕಾರ್ಯವನ್ನು ಸಕ್ರಿಯವಾಗಿ ನಿರ್ವಹಿಸುತ್ತದೆ. ಇದರಿಂದಾಗಿಯೇ ಯಾವುದೇ ಒಂದು ಆಡಳಿತ ಪಕ್ಷವು ಸರ್ವಾಧಿಕಾರಿಯಂತೆ ವರ್ತಿಸಲು ಅವಕಾಶವಿರುವುದಿಲ್ಲ. ತನಗೆ ಇಚ್ಛೆಬಂದಂತೆ ಕಾನೂನು ಕಟ್ಟಳೆಗಳ್ನು ಹಾಗೂ ನೀತಿ–ನಿಯಮಗಳನ್ನು ಕಾರ್ಯಕ್ರಮಗಳನ್ನು ಜಾರಿಗೆ ತರುವಂತಿಲ್ಲ. ಅದರ ಎಲ್ಲಾ ನೀತಿ–ರೀತಿಗಳನ್ನು ಸದಾಕಾಲವೂ ಪರಿಶೀಲಿಸುವ ಬಲಿಷ್ಠವಾದ ವಿರೋಧ ಪಕ್ಷವಾಗಿ ಸರಕಾರವನ್ನು ಸರಿಯಾದ ಹಾಗೂ ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸಲು ಒತ್ತಾಯಿಸುತ್ತದೆ. ಈ ದೃಷ್ಟಿಯಿಂದ ಸಂಸದೀಯ ಮಾದರಿ ಸರ್ಕಾರ ಪದ್ಧತಿಯಲ್ಲಿ ವಿರೋಧ ಪಕ್ಷಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವುದನ್ನು ಕಾಣಬಹುದಾಗಿದೆ. ಇದು ಒಂದು ರೀತಿಯಲ್ಲಿ ರಾಷ್ಟ್ರದ ಶಾಸನಗಳ ಕಾವಲು ಪಡೆಯಾಗಿ ಕಾರ್ಯವನ್ನು ನಿರ್ವಹಿಸಬೇಕು. ಸಮಯ ಸಿಕ್ಕಾಗ ಅದನ್ನು ಉಪಯೋಗಿಸಿಕೊಂಡು ಮುಂದೆ ಆಳುವ ಪಕ್ಷವಾಗಬಹುದು.

**ಒಕ್ಕೂಟ ವ್ಯವಸ್ಥೆ** *(Union System)* - ಭಾರತವು ವಿವಿಧ ಜಾತಿ, ಧರ್ಮ, ಜನಾಂಗ, ವರ್ಗ, ಸಂಸ್ಕೃತಿಯ ಜನರನ್ನು ಹೊಂದಿರುವ ಪರಿಣಾಮದಿಂದಾಗಿ ಇಲ್ಲಿನ ಆಡಳಿತದ ದೃಷ್ಟಿಯಿಂದ ಭಾರತದ ಸಮಗ್ರ ಭೂಪ್ರದೇಶವನ್ನು ವಿವಿಧ ರಾಜ್ಯಗಳಾಗಿ ವಿಂಗಡಿಸಿ ಆಡಳಿತವನ್ನು ನಡೆಸಲಾಗುತ್ತಿದೆ. ಆದ್ದರಿಂದಲೇ ಭಾರತವನ್ನು ಒಕ್ಕೂಟ ವ್ಯವಸ್ಥೆ ಹೊಂದಿರುವ ರಾಷ್ಟ್ರವೆಂದು ಕರೆಯಲಾಗುತ್ತದೆ. ಇದು ಅಧಿಕಾರ ವಿಭಜನೆ ಸಂವಿಧಾನದ ಅನಮ್ಯ–ನಮ್ಯ ದ್ವಿಸರ್ಕಾರ ಪದ್ದತಿ, ಸಂವಿಧಾನ ತಿದ್ದುಪಡಿ, ಸಂವಿಧಾನ ಶ್ರೇಷ್ಠತೆಯ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ, ದ್ವಿ–ಸದನ ಶಾಸಕಾಂಗ ಪದ್ಧತಿಯ ಲಕ್ಷಣಗಳನ್ನು ಒಳಗೊಂಡಿದೆ.

ಚಿಂತಕರಾದಂತಹ *Granville Austin* ಅವರು *"The Constitution framers refused to adhere to any Theory or dogma about federalism. The Constituent Assembly, infect produced a new kind of federalism to meet India's peculiar needs"* ಎಂದಿದ್ದಾರೆ. ಈ ವ್ಯಾಖ್ಯಾನಕ್ಕೆ ಪುಷ್ಟಿಯನ್ನು ನೀಡುವುದೇ ಆದರೆ, ಒಕ್ಕೂಟ ಮಾದರಿ ಸರ್ಕಾರದ ಬಗೆಗೆ ಗ್ರಹಿಸಿದ ಪಕ್ಷದಲ್ಲಿ ಅದು ಸರಿಸುಮಾರು ಕ್ರಿ.ಪೂ. 3ನೆಯ ಶತಮಾನದ ಗ್ರೀಸ್‌ನಲ್ಲಿ ಫೆಡರಲ್ ತತ್ವವು ಮೊಟ್ಟ ಮೊದಲ ಬಾರಿಗೆ ಪ್ರಚಲಿತವಾಗಿತ್ತು. ಆದರೂ ಸಹ, ಫೆಡರಲ್ ಎಂಬ ಆಂಗ್ಲ ಪದವನ್ನು ಸರಿಸುಮಾರು ಕ್ರಿ.ಶ 1645ರಲ್ಲಿ ಬಳಸಲಾಯಿತು. 1787ರಲ್ಲಿ ಅಮೇರಿಕದಲ್ಲಿ ಸಂಯುಕ್ತ ಪದ್ಧತಿ ಜಾರಿಗೆ ಬಂದ ಮೇಲೆ, ಈ ಫೆಡರಲ್ ಪದ್ಧತಿಯ ಸರ್ಕಾರವೂ ವಿಶ್ವದಲ್ಲಿಯೇ ಹೆಚ್ಚು ಜನಪ್ರಿಯವಾಯಿತು. ಬ್ರಿಟಿಷರು ಈ ಪದ್ಧತಿಯನ್ನು ತಮ್ಮ ದೇಶದಲ್ಲಿ ಅಳವಡಿಸಿಕೊಳ್ಳದೇ ಇದ್ದರೂ, ಇದೂ ಅಮೆರಿಕಾ, ಆಸ್ಟ್ರೇಲಿಯಾ, ಕೆನಡಾ ಮತ್ತು ಭಾರತದ ದೇಶಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸುವಂತೆ ಮಾಡಿದರು. ವೈವಿಧ್ಯತೆ ಇರುವ ಸ್ವಿಡ್ಜರ್‌ಲ್ಯಾಂಡ್, ನೈಜೀರಿಯಾ, ಜರ್ಮನಿ, ಮಲೇಷಿಯಾ, ಪಾಕಿಸ್ತಾನದಂತಹ ದೇಶಗಳಿಗೆ ಸಂಯುಕ್ತ ವ್ಯವಸ್ಥೆ ಸೂಕ್ತವಾಗಿದೆ.

ಬ್ರಿಟಿಷರು ತಮ್ಮ ದೇಶದಲ್ಲಿ ಅಳವಡಿಸಿಕೊಂಡಿದ್ದ ಏಕಾತ್ಮಕ ಸರ್ಕಾರ ಪದ್ಧತಿಯನ್ನು ಭಾರತದಲ್ಲಿಯು ಸಹ ಅಳವಡಿಸಿದರು. ಇದರಲ್ಲಿ ಬಲಿಷ್ಠ ಕೇಂದ್ರ ಸರ್ಕಾರ, ಪ್ರಾಂತ್ಯಗಳು ಕೇಂದ್ರದ ಸೃಷ್ಟಿ, ಅಧಿಕಾರ ವಿಕೇಂದ್ರಿಕರಣ, ಲಿಖಿತ ಮತ್ತು ಅಲಿಖಿತ ಸಂವಿಧಾನ, ಏಕ ಶಾಸಕಾಂಗ ಸಂಸತ್ತಿನ ಶ್ರೇಷ್ಠತೆ, ವಿಶೇಷ ನ್ಯಾಯಾಂಗದ ಅವಶ್ಯಕತೆ ಇಲ್ಲ. ಪ್ರಾಂತ್ಯಗಳಿಗೆ ಸ್ವಾಯತತ್ತೆ ಇಲ್ಲ. ಏಕ ಸಂವಿಧಾನ ಹಾಗೂ ಬಹುಪಕ್ಷ ಪದ್ಧತಿಯ ಲಕ್ಷಣವನ್ನು ಹೊಂದಿರುತ್ತದೆ. ಆದ್ದರಿಂದಲೇ ಇದು ಸಮರ್ಪಕವಾಗಿ ಕಾರ್ಯನಿರ್ವಹಿಸಲಿಲ್ಲ. ಏಕೆಂದರೆ, ವಿವಿಧ ಭಾಷೆಗಳು, ಧರ್ಮಗಳು, ಜನಾಂಗಗಳು ಹಾಗೂ ಸಂಪ್ರದಾಯಗಳಿಂದ ಕೂಡಿರುವ ಈ ಭಾರತಕ್ಕೆ ಫೆಡರಲ್ ಮಾದರಿಯು ಸೂಕ್ತವೆಂದು ಬ್ರಿಟಿಷರು ತಿಳಿದು ಇದನ್ನು ಬೆಂಬಲಿಸಿದರು. 1919ರಲ್ಲಿ ಮಾಂಟೆಗೋ ಚಲ್ಸ್ ಫೋರ್ಡ್ ಸುಧಾರಣೆ ಹಾಗೂ 1930ರಲ್ಲಿ ಸೈಮನ್ ಆಯೋಗದ ವರದಿಗಳು ಮತ್ತು 1930–32ರಲ್ಲಿ ನಡೆದಿರುವ ಅಂತರ ರಾಷ್ಟ್ರೀಯ ಮಟ್ಟದ ದುಂಡುಮೇಜಿನ ಸಮ್ಮೇಳನಗಳ ಉಪ ಸಮಿತಿಗಳು ಈ ಫೆಡರಲ್ ಮಾದರಿಯ ಸರ್ಕಾರ ಪದ್ಧತಿಯನ್ನೇ ಪ್ರಬಲವಾಗಿ ಬೆಂಬಲಿಸಿರುವುದು ಕಂಡುಬರುತ್ತದೆ. ಇದು ಅಂತಿಮವಾಗಿ 1935ರ ಭಾರತ ಸರ್ಕಾರ ಕಾಯಿದೆಯಲ್ಲಿ ಒಕ್ಕೂಟ ಸರ್ಕಾರದ ರಚನೆಗೆ ಬ್ರಿಟಿಷ್ ಸರ್ಕಾರ ಅನುವು ಮಾಡಿಕೊಟ್ಟಿತು. ಈ ಒಕ್ಕೂಟ ಪದ್ಧತಿಯ ಸರ್ಕಾರವನ್ನು ಅಂದು ಕೇಂದ್ರ ಮಟ್ಟದಲ್ಲಿ ಜಾರಿಗೆ ತರದೇ ಇದ್ದರೂ ಪ್ರಾಂತ್ಯಗಳಲ್ಲಿ ಚುನಾಯಿತ ಸರ್ಕಾರಗಳು ಜಾರಿಗೆ ತಂದಿರುತ್ತವೆ.

ಒಂದು ಏಕೀಕೃತ ಮತ್ತೊಂದು ಸಂಯುಕ್ತ ವ್ಯವಸ್ಥೆ ಎಂಬ ಸಂವಿಧಾನದಲ್ಲಿ ಎರಡು ರೂಪಗಳು ಪ್ರಸಿದ್ಧಿ ಪಡೆದುಕೊಂಡಿರುತ್ತವೆ. ಇದರಲ್ಲಿ ಏಕೀಕೃತ ವ್ಯವಸ್ಥೆಯು ಕೇಂದ್ರದ ರಾಜ್ಯಾಡಳಿತ ಪರಮೋನ್ನತವಾಗಿರುತ್ತದೆ. ಹಾಗೆಯೇ ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರದ ರಾಜ್ಯಾಡಳಿತ ಹಾಗೂ ಅಧೀನ ರಾಜ್ಯಗಳು ಜೊತೆಯಾಗಿದ್ದು, ದ್ವಿ–ಪ್ರಭುತ್ವವನ್ನು ಹೊಂದಿರುವುದರಿಂದ ಕರಡು ಸಂವಿಧಾನವು ಒಂದು ಸಂಯುಕ್ತ ಸಂವಿಧಾನವಾಗಿದೆ. ಆದ್ದರಿಂದ ಕೇಂದ್ರ ಮತ್ತು ರಾಜ್ಯಗಳೆರಡು ಸಂವಿಧಾನವು ವಹಿಸಿರುವ ಕ್ಷೇತ್ರದಲ್ಲಿ ಸರ್ವೋನ್ನತ ಅಧಿಕಾರವನ್ನು ಹೊಂದಿರುತ್ತವೆ. ಈ ದ್ವಿ–ಆಡಳಿತ ಪದ್ಧತಿಯು ಅಮೇರಿಕ ಸಂವಿಧಾನವನ್ನು ಹೋಲುತ್ತದೆ. ಅಲ್ಲಿಯೂ ಸಹ ಈ ಎರಡು ಬಗೆಯ ಆಡಳಿತಗಳಿದ್ದು, ಅದರಲ್ಲಿ ಒಂದು ಫೆಡರಲ್ ಸರ್ಕಾರವಿದೆ. ಇನ್ನೊಂದು ರಾಜ್ಯ ಸರ್ಕಾರವಿದೆ. ಇವು ಕ್ರಮವಾಗಿ ಸಂವಿಧಾನ ರಚನಾ ಸಭೆಯು ಕರಡು ರಚನಾ ಸಮಿತಿಯು ರೂಪಿಸಿರುವ ಸಂವಿಧಾನವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ವ್ಯವಸ್ಥೆಯನ್ನು ಹೋಲುತ್ತದೆ. ಆದ್ದರಿಂದ ಕೇಂದ್ರವು ಸಡಿಲವಾಗಿ ಸಂಬಂಧಿಸಿದ ರಾಜ್ಯಗಳ ಒಂದು ಕೂಟ ಮಾತ್ರವಲ್ಲ. ಹಾಗೆಯೇ ರಾಜ್ಯಗಳು ಕೇಂದ್ರದಿಂದ ಅಧಿಕಾರವನ್ನು ಪಡೆದುಕೊಳ್ಳುವ ಅವರ ಏಜೆನ್ಸಿಗಳಾಗಿರುವುದಿಲ್ಲ. ಹಾಗೆಯೇ ಒಂದು ಇನ್ನೊಂದಕ್ಕೆ ತನ್ನ ಕ್ಷೇತ್ರದಲ್ಲಿ ಅಧೀನವಾಗಿರುವುದಿಲ್ಲ. ಒಂದರ ಅಧಿಕಾರ ಇನ್ನೊಂದರೊಂದಿಗೆ ಸಂಯೋಜಕವಾಗಿರುತ್ತದೆ.

ಕೇಂದ್ರೀಕೃತ ಸಂಯುಕ್ತ ಪದ್ಧತಿಯನ್ನು ಅಳವಡಿಸುವ ನಿರ್ಧಾರಕ್ಕೆ ಬಂದಿರುವುದನ್ನು "ಲಕ್ಷ್ಮಣನಾರಾಯಣ ಸಾಹು, ಕೆ. ಹನುಮಂತಯ್ಯ, ಎಚ್.ಎನ್.ಕುಂಜ್ರು, ಎಚ್.ವಿ. ಕಾಮತ್ ಅವರು ಟೀಕಿಸಿರುವುದಕ್ಕೆ ಅಂಬೇಡ್ಕರ್ ಅವರು ಪ್ರತಿಕ್ರಿಯಿಸುತ್ತಾ; "ಕೇಂದ್ರಕ್ಕೆ ಎಷ್ಟರ ಮಟ್ಟಿಗೆ ಅಧಿಕಾರವನ್ನು ಕೊಡದೇ ಹೋದರು ಸಹ ಅದು ಬಲವಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಏಕೆಂದರೆ, ಆಧುನಿಕ ಜಗತ್ತಿನಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ; ಅಧಿಕಾರ ಕೇಂದ್ರೀಕರಣ ಅನಿವಾರ್ಯವಾಗಿದೆ. ಅಮೇರಿಕಾದ ಫೆಡರಲ್ ಸರ್ಕಾರದಲ್ಲಿ ಸಂವಿಧಾನವು ತುಂಬಾ ಸೀಮಿತವಾದ ಅಧಿಕಾರ ಇತ್ತು. ಆದರೂ ಸಹ ಹಿಂದಿನ ರೂಪವನ್ನು ಮೀರಿ ಬೆಳೆದು ರಾಜ್ಯ ಸರ್ಕಾರಗಳನ್ನು ಮೀರಿಸಿಬಿಟ್ಟಿವೆ. ಆಧುನಿಕ ಪರಿಸ್ಥಿತಿಗಳೇ ಇದಕ್ಕೆ ಕಾರಣ. ಇಂತಹ ಕಾರಣಗಳೇ ಭಾರತ ಸರ್ಕಾರದ ಮೇಲೆ ವರ್ತಿಸುತ್ತಿರುವುದು" ಎಂದಿದ್ದಾರೆ. ಇಲ್ಲಿ ಕೇಂದ್ರ ಸರ್ಕಾರವು ಸರ್ವಾಧಿಕಾರಿಯಂತೆ ಹೆಚ್ಚಿನ ಅಧಿಕಾರವನ್ನು ಹೊಂದುವುದರ ಮೂಲಕ ರಾಜ್ಯಗಳ ಹಿತಾಸಕ್ತಿಗೆ ಬೆಲೆ ಇಲ್ಲದಂತಾಗುತ್ತದೆ ಎಂಬುದೇ ಇದರ ಪ್ರಮುಖ ಉದ್ದೇಶವಾಗಿರುತ್ತದೆ.

ಕರಡು ರಚನಾ ಸಮಿತಿಯು ತನ್ನ ಕರಡು ಸಂವಿಧಾನದಲ್ಲಿ ಯೂನಿಯನ್ (Union) ಪದವನ್ನು ಬಳಸಿತು. ಅದಕ್ಕೆ ಅಂಬೇಡ್ಕರ್ ಅವರು "1948ನೆಯ ನವೆಂಬರ್ 4 ರಂದು *What is important is that the use of the word '**Union**' is deliberate... The federation is Union because it is in destructible.*

*Though the country and the people may be divided into different states for convenience of administration, the country is one integrated whole, its single people living under a single imperium"* ಎಂದಿದ್ದಾರೆ. ಈ ಒಕ್ಕೂಟ ವ್ಯವಸ್ಥೆಯಿಂದ ರಾಜ್ಯಗಳಲ್ಲಿ ಸಮಗ್ರ ಹಾಗೂ ಐಕ್ಯತೆಯನ್ನು ಉಂಟುಮಾಡುವುದು. ಒಂದು ವೇಳೆ ಅವುಗಳು ವಿಶೇಷ ಧೋರಣೆ ಪ್ರದರ್ಶಿಸಿದರೆ, ರಾಜ್ಯಗಳು ವಿಭಜನೆ ಕಾರಣವಾಗಬಹುದು. ಇಂತಹ ಪರಿಸ್ಥಿತಿಯಲ್ಲಿ ಒಕ್ಕೂಟ ಸರ್ಕಾರವು ತನ್ನ ನಿಯಂತ್ರಣ ತೆಗೆದುಕೊಳ್ಳಬಹುದು. ಆದ್ದರಿಂದ ಒಕ್ಕೂಟ ತತ್ವವು ಕೇಂದ್ರಗಳಿಗೂ ಹಾಗೂ ರಾಜ್ಯಗಳಿಗೂ ನಡುವೆ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರಗಳನ್ನು ಸಂವಿಧಾನವೇ ವಿಭಾಗ ಮಾಡಿಕೊಡುವುದರಿಂದ ನಮ್ಮ ಸಂವಿಧಾನದ ತತ್ವವಿದು. ಇದರಲ್ಲಿ ಯಾವುದು ತಪ್ಪು ಭಾವನೆಗೂ ಅವಕಾಶವಿಲ್ಲ. ಆದ್ದರಿಂದ, ರಾಜ್ಯಗಳನ್ನು ಕೇಂದ್ರದ ಕೈಕೆಳಗೆ ಇಡಲಾಗಿದೆ ಎಂದು ಹೇಳುವುದೂ ತಪ್ಪು. ಏಕೆಂದರೆ, ಕೇಂದ್ರವು ತನ್ನ ಇಚ್ಛೆಯ ಪ್ರಕಾರ ಈ ವಿಭಜನೆಯ ಗಡಿಯನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಭಾರತ ವೈವಿಧ್ಯಮಯ ರಾಷ್ಟ್ರವಾಗಿದ್ದು, ಭಾಷೆ, ಧರ್ಮ, ಸಂಸ್ಕೃತಿ, ಆಚಾರ–ವಿಚಾರಗಳು ವಿಭಿನ್ನವಾಗಿರುವುದರಿಂದಲೇ ಸಂಯುಕ್ತ ಪದ್ಧತಿಯೇ ಉತ್ತಮವಾಗಿದೆ. ಅಂಬೇಡ್ಕರ್ ಅವರ ಈ ಅಭಿಪ್ರಾಯಗಳಿಗೆ ಕರಡು ಸಂವಿಧಾನ ರಚನಾ ಸಮಿತಿಯಲ್ಲಿ ಕಾರ್ಯನಿರ್ವಹಿಸಿರುವ ಸಹವರ್ತಿಗಳಿಂದಲೂ ಕೂಡ ಒಮ್ಮತದ ಬೆಂಬಲ ಸಿಕ್ಕಿರುಕ್ಕಿರುವುದು ಕಂಡುಬರುತ್ತದೆ.

**ಬಲಿಷ್ಠ ಕೇಂದ್ರ ಸರ್ಕಾರ** *(Strong Central Government)* - ಸಂವಿಧಾನದ ರಚನಾ ಸಭೆಯು ಭಾರತದಲ್ಲಿ ಒಂದು ಬಲಿಷ್ಠ ಕೇಂದ್ರ ಸರ್ಕಾರವನ್ನು ಸ್ಥಾಪಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿರುತ್ತದೆ. ಅದರಂತೆಯೇ ಕಾಂಗ್ರೆಸ್ ಸದಸ್ಯರು ಹಾಗೂ ಅಂಬೇಡ್ಕರ್ ಅವರು ಕೂಡ ಈ ಬಲಿಷ್ಠ ಕೇಂದ್ರ ಸರ್ಕಾರವನ್ನು ಬೆಂಬಲಿಸಿದರು. ಆದ್ದರಿಂದ ಎಲ್ಲರ ಬೆಂಬಲ ಹಾಗೂ ಸಹಕಾರದಿಂದ ಕೇಂದ್ರಕ್ಕೆ ಹೆಚ್ಚಿನ ಅಧಿಕಾರವೂ ಲಭಿಸಿರುತ್ತದೆ. ಹಾಗಾಗಿಯೇ ಭಾರತೀಯ ಸಂವಿಧಾನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚು ಹಾಗೂ ವಿಶೇಷವಾದ ಅಧಿಕಾರಗಳನ್ನು ನೀಡಿರುತ್ತದೆ.

ಸಂವಿಧಾನವು ಒಕ್ಕೂಟ ಮಾದರಿಯ ಸರ್ಕಾರವನ್ನು ಅಳವಡಿಸಿಕೊಂಡಿದ್ದರೂ ಸಹ ಏಕಾತ್ಮಕ ಸರ್ಕಾರದ ಹಲವು ಅಂಶಗಳನ್ನು ಒಳಗೊಂಡಿದೆ. ಸಂವಿಧಾನ ಸೃಷ್ಟಿಕರ್ತರು ಬಲಿಷ್ಠ ಕೇಂದ್ರ ಸರ್ಕಾರದ ಅಸ್ತಿತ್ವಕ್ಕೆ ತುಂಬ ಕಾಳಜಿಯಿಂದ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಹಾಗಾಗಿಯೇ, ಕರಡು ಸಂವಿಧಾನವು ಕಾಲ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಏಕೀಕೃತ ಅಥವಾ ಸಂಯುಕ್ತವೂ ಕೂಡ ಆಗಬಹುದು. ಸಾಮಾನ್ಯ ಪರಿಸ್ಥಿತಿಗಳಲ್ಲಿ ಒಕ್ಕೂಟವಾಗಿಯೂ ವರ್ತಿಸುತ್ತದೆ. ಮತ್ತೇ ಯುದ್ಧ ಸಂದರ್ಭದ ಕಾಲದಲ್ಲಿ ರಾಷ್ಟ್ರದ ಏಕತೆ ಹಾಗೂ ಭದ್ರತೆ ದೃಷ್ಟಿಯಲ್ಲಿ ಏಕೀಕೃತವಾಗಿ ತನ್ನ ಬಲಿಷ್ಠತೆಯಿಂದ

ಕಾರ್ಯನಿರ್ವಹಿಸುತ್ತದೆ. ಆದರೆ "ರಾಷ್ಟ್ರಾಧ್ಯಕ್ಷರು, 275ನೆಯ ಅನುಚ್ಛೇದದ ಅನ್ವಯ ತಮಗಿರುವ ಅಧಿಕಾರವನ್ನು ಉಪಯೋಗಿಸಿ ಘೋಷಣೆಯನ್ನು ಹೊರಡಿಸಿದರೆ, ಕೇಂದ್ರವು ಒಂದು ಏಕೀಕೃತ ರಾಜ್ಯವಾಗುತ್ತದೆ. ರಾಷ್ಟ್ರಾಧ್ಯಕ್ಷರ ಈ ಘೋಷಣೆಯ ಸಮಯದಲ್ಲಿ ಕೇಂದ್ರವು;

- ಯಾವುದೇ ವಿಷಯವು ರಾಜ್ಯ ಪಟ್ಟಿಗೆ ಸೇರಿದ್ದರು ಸಹ, ಕಾನೂನು ಮಾಡುವ ಅಧಿಕಾರಯಿರುತ್ತದೆ.
- ರಾಜ್ಯಗಳು ತಮ್ಮ ವಶದಲ್ಲಿರುವ ವಿಷಯಗಳಲ್ಲಿ ಕಾರ್ಯಾಧಿಕಾರವನ್ನು ಹೇಗೆ ಚಲಾಯಿಸ ಬೇಕೆಂಬುದರ ಬಗೆಗೆ ರಾಜ್ಯಗಳಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಪಡೆಯಬಹುದು.
- ಯಾವುದೇ ಉದ್ದೇಶಕ್ಕಾಗಿ ಯಾವುದೇ ಅಧಿಕಾರಿಗೆ ಅಧಿಕಾರ ಕೊಡುವ ಅಧಿಕಾರವನ್ನು ಪಡೆಯಬಹುದು.
- ಸಂವಿಧಾನದ ಹಣಕಾಸು ಸಂಬಂಧದ ಅವಕಾಶಗಳನ್ನು ರದ್ದುಪಡಿಸಲು ಅಧಿಕಾರ ಪಡೆಯಬಹುದು.

ಕರಡು ರಚನಾ ಸಮಿತಿಯು ಸಂವಿಧಾನದ ಏಳನೆಯ ಅನುಸೂಚಿಯಲ್ಲಿ –

1. ಕೇಂದ್ರ ಪಟ್ಟಿ - *Union list or List I*
2. ರಾಜ್ಯ ಪಟ್ಟಿ - *State list or List II*
3. ಸಮವರ್ತಿ ಪಟ್ಟಿ - *Concurrent or List III*

ಎಂದು ಮೂರು ಪಟ್ಟಿಗಳಾಗಿ ಹಂಚಿಕೆ ಮಾಡಲಾಗಿರುತ್ತದೆ. ಹಾಗಾಗಿ ಸಂವಿಧಾನದ 217ನೇ ವಿಧಿಯು ಈ 3 ಪಟ್ಟಿಗಳ ಬಗೆಗೆ ಸವಿಸ್ತಾರವಾದ ವಿವರಣೆ ನೀಡುತ್ತದೆ.

**ಒಕ್ಕೂಟ ಪಟ್ಟಿ ಅಥವಾ ಕೇಂದ್ರ ಪಟ್ಟಿ *(Union List or LIST I)* –** ಈ ಮೂಲ ಒಕ್ಕೂಟ ಪಟ್ಟಿಯಲ್ಲಿ 91 ವಿಷಯಗಳು ಇದ್ದವು. ಒಕ್ಕೂಟ ಪಟ್ಟಿ ಎಂದರೆ; ಇದರಲ್ಲಿ ಬರುವ ಎಲ್ಲಾ ವಿಷಯಗಳು ಕೂಡ ನೇರವಾಗಿ ಕೇಂದ್ರ ಸರ್ಕಾರದ ಅಧಿನಕ್ಕೆ ಒಳಪಟ್ಟಿರುತ್ತವೆ. ಇದನ್ನು ಒಕ್ಕೂಟ ಪಟ್ಟಿ ಅಥವಾ ಕೇಂದ್ರಪಟ್ಟಿ ಎಂದು ಕರೆಯಲಾಗುತ್ತದೆ. ಕೇಂದ್ರ ಪಟ್ಟಿಯು ಕೇಂದ್ರದಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿರುತ್ತದೆ. ಕೇಂದ್ರಪಟ್ಟಿಯಲ್ಲಿರುವ ವಿಷಯಗಳಿಗೆ ಸಂಸತ್ತು ಮಸೂದೆ ಮಾಡುವ ಹಾಗೂ ತಿದ್ದುಪಡಿ ಮಾಡುವ ಅಧಿಕಾರವನ್ನು ಹೊಂದಿದೆ. "1956ನೆಯ ಸೆಪ್ಟೆಂಬರ್ 11ರಂದು ಸಂವಿಧಾನಕ್ಕೆ 6ನೆಯ ತಿದ್ದುಪಡಿಯನ್ನು ಮಾಡಲಾಯಿತು. ಇದರ ಅನ್ವಯ 92ಎ ಅನುಚ್ಛೇದವನ್ನು ಅಳವಡಿಸಿತು. ಇದರಿಂದಾಗಿ ಅಂತರರಾಜ್ಯ

ಮಾರಾಟಗಳ ತೆರಿಗೆಯನ್ನು ಕೇಂದ್ರ ವಿಷಯವನ್ನಾಗಿ ಮಾಡಲಾಗಿರುತ್ತದೆ. ಈ ವಿಷಯದಲ್ಲಿ ಉಂಟಾಗುವ ಸಮಸ್ಯೆಯನ್ನು ಬಗೆಹರಿಸಲು 286ನೆಯ ಅನುಚ್ಛೇದವನ್ನು ತಿದ್ದುಪಡಿ ಮಾಡಲಾಯಿತು. ಮತ್ತೇ ಈ ಅಂತರರಾಜ್ಯ ಮಾರಾಟಗಳಿಂದ ಬಂದ ತೆರಿಗೆಯನ್ನು ರಾಜ್ಯಗಳಿಗೆ ಹಂಚುವ 269ನೆಯ ಅನುಚ್ಛೇದವನ್ನು ತಿದ್ದುಪಡಿ ಮಾಡಲಾಯಿತು." ಇದು ಸಂಪೂರ್ಣ ಕೇಂದ್ರ ಸರ್ಕಾರದ ಅಧೀನ ವಿಚಾರಗಳನ್ನು ಒಳಗೊಂಡಿದ್ದು, ಇಲ್ಲಿನ ವಿಷಯಗಳಿಗೆ ಏನಾದರೂ ಬದಲಾವಣೆಗಳನ್ನು, ತಿದ್ದುಪಡಿಗಳನ್ನು ತರುವ ಅಧಿಕಾರ ರಾಜ್ಯ ಮತ್ತು ಸಮವರ್ತಿ ಪಟ್ಟಿಗಳಿಂದ ಯಾವುದಾದರೂ ವಿಷಯಗಳನ್ನು ಕೇಂದ್ರ ಪಟ್ಟಿಗೆ ಸೇರಿಸಬೇಕು ಎಂದು ಸಂಸತ್ತು ತೀರ್ಮಾನಿಸಿದಾಗ, ಅದನ್ನು ಸೇರಿಸುವ ಅಥವಾ ಕೈಬಿಡುವ ಅಧಿಕಾರವನ್ನು ಈ ಕೇಂದ್ರ ಸರ್ಕಾರ ಹೊಂದಿರುತ್ತದೆ.

ಸಂವಿಧಾನಕ್ಕೆ 2013ರಲ್ಲಿ 88ನೆಯ ತಿದ್ದುಪಡಿಯ ಅನ್ವಯ 268ಎ ಅನುಚ್ಛೇದವನ್ನು ಸೇರಿಸಲಾಗಿದೆ. ಈ ತಿದ್ದುಪಡಿಯ ಪ್ರಕಾರ; ಕೇಂದ್ರ ಸರ್ಕಾರ ವಿಧಿಸುವ ಸೇವಾ ತೆರಿಗೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ವಸೂಲಿ ಮಾಡಿ ಹಂಚಿಕೊಳ್ಳುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪದೇಪದೆ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವುದರಿಂದ ಪ್ರಸ್ತುತ ಇದರಲ್ಲಿ 100 ವಿಷಯಗಳಿವೆ. ಇದು ಬಹುಮುಖ್ಯವಾದ ಮತ್ತು ಹೆಚ್ಚಿನ ಆದಾಯವನ್ನು ಹೊಂದಿರುವ ವಿಷಯಗಳನ್ನು ಒಳಗೊಂಡಿರುತ್ತದೆ.

**ರಾಜ್ಯ ಪಟ್ಟಿ** *(State list or LIST II)* **-** ಕೇಂದ್ರ ಪಟ್ಟಿಯೂ ಸಮಗ್ರ ರಾಷ್ಟ್ರದ ವ್ಯಾಪ್ತಿಯನ್ನು ಹೊಂದಿದ್ದರೆ, ಇದು ರಾಜ್ಯಕ್ಕೆ ಮಾತ್ರ ಸಮಿತವಾಗಿರುತ್ತದೆ. ಈ ರಾಜ್ಯಪಟ್ಟಿಯು ರಾಜ್ಯಗಳಲ್ಲಿ ಬರುವ ವಿಷಯಗಳಿಗೆ ಸಂಬಂಧಿಸಿದೆ. ಇದರ "ಮೂಲ ರಾಜ್ಯ ಪಟ್ಟಿಯಲ್ಲಿ 66 ವಿಷಯಗಳಿದ್ದವು." ರಾಜ್ಯಪಟ್ಟಿಯ ವಿಷಯಗಳಿಗೆ ರಾಜ್ಯ ಶಾಸಕಾಂಗ ತಿದ್ದುಪಡಿಯನ್ನು ತರುವುದು. ಕೆಲವು ಸಂದರ್ಭಗಳಲ್ಲಿ ಈ ವಿಷಯಗಳ ಬಗೆಗೆ ಕಾನೂನನ್ನು ರಚಿಸಲು ರಾಜ್ಯ ಶಾಸಕಾಂಗಗಳಿಗೆ ಅಂತಿಮವಾದ ಅಧಿಕಾರವೂ ಇರುವುದಿಲ್ಲ. ಏಕೆಂದರೆ, ರಾಷ್ಟ್ರೀಯ ಹಿತಾಸಕ್ತಿ ಹೆಸರಿನಲ್ಲಿ ಮತ್ತು ತುರ್ತುಪರಿಸ್ಥಿತಿಯ ಸಮಯದಲ್ಲಿ ರಾಜ್ಯ ಪಟ್ಟಿಯಲ್ಲಿರುವ ವಿಷಯಗಳ ಬಗೆಗೆ ಕೇಂದ್ರದ ಸಂಸತ್ತು ಕಾನೂನನ್ನು ಮಾಡಬಲ್ಲ ಅಧಿಕಾರವನ್ನು ಸಂವಿಧಾನ 226, 227 ಮತ್ತು 229ನೆಯ ಅನುಚ್ಛೇದಗಳು ರಾಜ್ಯಪಟ್ಟಿಯಲ್ಲಿ ಇರುವ ವಿಷಯಗಳ ಮೇಲೆ ಶಾಸನಗಳನ್ನು ಮಾಡಲು ಸಂಸತ್ತಿಗೆ ಅಧಿಕಾರವನ್ನು ನೀಡಿದೆ.

- 226ನೆಯ ಅನುಚ್ಛೇದವು ರಾಜ್ಯಪಟ್ಟಿಯಲ್ಲಿರುವ ವಿಷಯವು ಪೂರ್ತಿಯಾಗಿ ಪ್ರಾಂತೀಯ ಕಾಳಜಿಯ ವಿಷಯವಾಗಿರದೆ ರಾಷ್ಟ್ರೀಯ ಕಾಳಜಿಯ ವಿಷಯವಾಗಿರುವಾಗ ಸಂಸತ್ತು ಅದನ್ನು ಕುರಿತು ಕಾನೂನು ಮಾಡಬಹುದು. ಕೇಂದ್ರವು ಅಧಿಕಾರ ಚಲಾಯಿಸುವುದರ ಪರವಾಗಿ ಮೇಲ್ಮನೆಯಲ್ಲಿ 2/3ರಷ್ಟು ಬಹುಮತದಿಂದ ನಿರ್ಣಯವನ್ನು ಅಂಗೀಕರಿಸಬೇಕು.

- 227ನೆಯ ಅನುಚ್ಛೇದವು ರಾಷ್ಟ್ರೀಯ ತುರ್ತುಪರಿಸ್ಥಿತಿಯಲ್ಲಿ ರಾಜ್ಯಪಟ್ಟಿಯಲ್ಲಿರುವ ವಿಷಯದ ಬಗೆಗೆ ಸಂಪೂರ್ಣ ಅಧಿಕಾರ ಸಂಸತ್ತಿಗೆ ನೀಡುತ್ತದೆ.
- 229ನೆಯ ಅನುಚ್ಛೇದವು ಪ್ರಾಂತ್ಯಗಳು ಸಮ್ಮತಿಸಿದರೆ, ಅದೇ ಅಧಿಕಾರವನ್ನು ಸಂಸತ್ತು ಚಲಾಯಿಸಬಹುದು. ಇವುಗಳಿಗೆ ಸಂಬಂಧಿಸಿದಂತೆ 'ಸಂವಿಧಾನಕ್ಕೆ' 1956ನೆಯ ನವೆಂಬರ್ 1 ರಂದು 7ನೆಯ ತಿದ್ದುಪಡಿಯನ್ನು ತರುವ ಮುಖೇನ ಇದರಲ್ಲಿ 7ನೆಯ ಅನುಸೂಚಿಗೆ ತಿದ್ದುಪಡಿ ಮಾಡಿ 36ನೆಯ ವಿಷಯವನ್ನು ಮತ್ತು 1976 ಡಿಸೆಂಬರ್ 18 ರಂದು 42ನೆಯ ತಿದ್ದುಪಡಿಯ ಮೂಲಕ 11, 19, 20 ಹಾಗೂ 29ನೆಯ ವಿಷಯಗಳನ್ನು ಕೇಂದ್ರ ಸರ್ಕಾರವು ತೆಗೆದು ಹಾಕಿತು. ಆದ್ದರಿಂದ, ರಾಜ್ಯ ಪಟ್ಟಿಯಲ್ಲಿನ ವಿಷಯಗಳ ಸಂಖ್ಯೆ 61ಕ್ಕೆ ಇಳಿದಿದೆ. ರಾಜ್ಯಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳನ್ನು ಈ ಪಟ್ಟಿಯಲ್ಲಿ ಅಳವಡಿಸುವುದು ಕಂಡುಬಂದಿರುತ್ತದೆ.

**ಸಮವರ್ತಿ ಪಟ್ಟಿ** *(Concurrent list or LIST III)* - ಕರಡು ರಚನಾ ಸಮಿತಿಯು ಆಸ್ಟ್ರೇಲಿಯಾ ಸಂವಿಧಾನದಲ್ಲಿ ಇರುವ ಸಮವರ್ತಿ ಪಟ್ಟಿಯಂತೆ ಭಾರತದ ಸಂವಿಧಾನದಲ್ಲಿ ಅಳವಡಿಸಿದೆ. ಆಸ್ಟ್ರೇಲಿಯ ಸಮವರ್ತಿ ಪಟ್ಟಿಯಲ್ಲಿ 39 ವಿಷಯಗಳಿದ್ದು, ಕಾನೂನು ಮಾಡಲು ಕೇವಲ ಮೂರು ವಿಷಯಗಳಲ್ಲಿ ಪ್ರತ್ಯೇಕ ಅಧಿಕಾರ ಹೊಂದಿದೆ. ಭಾರತ ಸಂವಿಧಾನದ "ಮೂಲ ಸಮವರ್ತಿ ಪಟ್ಟಿಯಲ್ಲಿ 37 ವಿಷಯಗಳಿದ್ದವು." ಕರಡು ರಚನಾ ಸಂವಿಧಾನ ಸೂಚಿಸಿರುವ ಸಂಸತ್ತಿನ ಶಾಸನ ಅಧಿಕಾರವು 91 ವಿಷಯಗಳಿಗೆ ವಿಸ್ತರಿಸಿದೆ.

ಸಂವಿಧಾನಕ್ಕೆ "1956ನೆಯ ನವೆಂಬರ್ 1 ರಂದು 7ನೆಯ ತಿದ್ದುಪಡಿಯನ್ನು ತಂದಿತು." ಈ ತಿದ್ದುಪಡಿ ತರುವ ಮೂಲಕ ರಾಜ್ಯ ಪಟ್ಟಿಯಿಂದ 37ನೆಯ ವಿಷಯವನ್ನು *(Aquisition or requisition of property)* ತೆಗೆದು ಹಾಕಿ, ಸಮವರ್ತಿ ಪಟ್ಟಿಯಲ್ಲಿ ಮೊದಲಿದ್ದಂತಹ 42ನೆಯ ವಿಷಯಕ್ಕೆ ಬದಲಿಯಾಗಿ ಇದನ್ನು ಸೇರ್ಪಡೆಗೊಳಿಸಲಾಗಿರುತ್ತದೆ. ಇದೇ ರೀತಿಯಾಗಿಯೇ ರಾಜ್ಯ ಪಟ್ಟಿಯಿಂದ ಶಿಕ್ಷಣವನ್ನು (11ನೆಯ ವಿಷಯವನ್ನು) "1976ನೆಯ ಡಿಸೆಂಬರ್ 18 ರಂದು 42ನೆಯ ತಿದ್ದುಪಡಿಯ ಮುಖೇನ ತೆಗೆದು ಹಾಕಿ, ಸಮವರ್ತಿ ಪಟ್ಟಿಯಲ್ಲಿ ಮೊದಲಿದ್ದಂತಹ 25ನೆಯ ವಿಷಯದ *(Vocation and Technical Training)* ಜೊತೆಗೆ ಸೇರಿಸಲಾಗಿರುತ್ತದೆ." ಇದೇ ತಿದ್ದುಪಟ್ಟಿಯ ಮೂಲಕ ಅರಣ್ಯ (19), ಪ್ರಾಣಿಗಳ ಪಕ್ಷಿಗಳ ರಕ್ಷಣೆ (20) ಮತ್ತು ತೂಕ ಹಾಗೂ ಅಳತೆ (29)ಗಳನ್ನು ಸೇರಿಸಿರುವುದು ಕಂಡುಬಂದಿರುತ್ತದೆ. ಇದರ ಕಾರಣ ಮತ್ತು ಪರಿಣಾಮದಿಂದಾಗಿಯೇ ಸಮವರ್ತಿ ಪಟ್ಟಿಯಲ್ಲಿನ ವಿಷಯಗಳ ಸಂಖ್ಯೆ 52ಕ್ಕೆ ಹೆಚ್ಚಿರುತ್ತದೆ. ಈ ವಿಷಯಗಳ ಬಗೆಗೆ ಕೇಂದ್ರದ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ಕಾನೂನನ್ನು ಮಾಡುವಂತಹ ಅಧಿಕಾರವನ್ನು ಹೊಂದಿರುತ್ತವೆ. ಒಂದು ವೇಳೆ, ರಾಜ್ಯವೊಂದರ ಕಾನೂನು ಜಾರಿಗೆ

ಬರುವ ಮೊದಲು ಅಥವಾ ಅನಂತರ ಸಂಸತ್ತು ಅದೇ ವಿಷಯದ ಬಗೆಗೆ ಕಾನೂನು ರಚಿಸಿ, ಘರ್ಷಣೆ ಉಂಟಾದಾಗ ಕೇಂದ್ರದ ಕಾನೂನು ಜಾರಿಗೆ ಬರುತ್ತದೆ. ಆದ್ದರಿಂದ, ಸ್ಪಷ್ಟವಾಗುವುದೆನೆಂದರೆ; ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳ ಮೇಲೂ ಸ್ವತಂತ್ರವಾದ ಅಧಿಕಾರ ರಾಜ್ಯಗಳಿಗೆ ಇಲ್ಲವಾಗಿರುತ್ತದೆ. ಹೀಗಾಗಿ, ಸಮವರ್ತಿ ಪಟ್ಟಿಯಲ್ಲಿ ಅಂತಿಮವಾಗಿ ಅಧಿಕಾರವೂ ಮತ್ತೇ ಕೇಂದ್ರ ಸರ್ಕಾರದ ಪರಿಮಿತಿಗೆ ಬಂದು ಸೇರುತ್ತದೆ. ಅಂದರೆ, ಭಾರತದ ಸಂವಿಧಾನವು ಶೇಷಾಧಿಕಾರವನ್ನು (ಉಳಿಕೆ) ಕೇಂದ್ರ ಸರ್ಕಾರಕ್ಕೆ ನೀಡಿರುವುದು ಬಹುಪ್ರಧಾನವಾದ ಅಂಶವಾಗಿ ಕಂಡುಬರುತ್ತದೆ. ಆದ್ದರಿಂದ, ಇಲ್ಲಿ ಬಹುಸ್ಪಷ್ಟವಾಗಿ ತಿಳಿದುಬರುವುದೆಂದರೆ, 1950 ರಿಂದ ಸಂವಿಧಾನಾತ್ಮಕ ಬೆಳವಣಿಗೆಯಲ್ಲಿ ಕೇಂದ್ರವು ತನ್ನ ಪಟ್ಟಿಯಲ್ಲಿ ಅಥವಾ ಸಮವರ್ತಿ ಪಟ್ಟಿಯಲ್ಲಿ ಹೆಚ್ಚು-ಹೆಚ್ಚು ವಿಷಯಗಳನ್ನು ಸೇರಿಸುವ ಮುಖೇನ ರಾಜ್ಯ ಪಟ್ಟಿಯಲ್ಲಿ ಸೀಮಿತಗೊಳಿಸುತ್ತಿರುವುದು ಗಮನಾರ್ಹವಾದ ವಿಷಯವಾಗಿರುತ್ತದೆ.

ಅಂಬೇಡ್ಕರ್ ಅವರು ಹೇಳಿರುವಂತೆ, "ವಿಶೇಷ ಸಂದರ್ಭಗಳಲ್ಲಿ ಏಕಾತ್ಮಕ ಪದ್ಧತಿಯಂತೆ ಮತ್ತು ಸಾಮಾನ್ಯ ಸಂದರ್ಭಗಳಲ್ಲಿ ಸಂಯುಕ್ತ ಪದ್ಧತಿಯಂತೆ ಕಂಡುಬರುತ್ತದೆ. ಯೋಜನಾ ಪದ್ಧತಿಯೂ ಕೇಂದ್ರೀಕೃತ ಸಂಯುಕ್ತ ಪದ್ಧತಿಗೆ ಕಾರಣವಾಗಿದೆ. ಕಾರ್ಯಾಂಗದ ಆದೇಶದ ಮೇರೆಗೆ ರಚಿತಗೊಂಡಿರುವ ರಾಷ್ಟ್ರೀಯ ಯೋಜನಾ ಆಯೋಗವು ಭಾರತದ ಆರ್ಥಿಕ ಹಾಗೂ ಸೂಪರ್ ಕ್ಯಾಬಿನೆಟ್‌ನಂತೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯಗಳಿಗೆ ಇದರಲ್ಲಿ ಪ್ರಾತಿನಿಧ್ಯತೆಯೂ ಇಲ್ಲದಿದ್ದರೂ ಕೂಡ ಅವುಗಳು ರೂಪಿಸಿದ ಯೋಜನೆಗಳನ್ನು ಮಾರ್ಪಾಡು ಮಾಡುವಂತಹ ಅಧಿಕಾರವನ್ನು ಹೊಂದಿದೆ" ಎಂದೇ ಹೇಳಿದ್ದಾರೆ. ಒಟ್ಟಾರೆಯಾಗಿ, ಅಂಬೇಡ್ಕರ್ ಅವರು ಬಲಿಷ್ಠ ಕೇಂದ್ರ ಸರ್ಕಾರದ ಪ್ರಬಲ ಪ್ರತಿಪಾದನೆಗೆ ನೀಡಿರುವ ಕಾರಣಗಳೆಂದರೆ, ರಾಷ್ಟ್ರದ ಏಕತೆ, ಸಮಗ್ರತೆ ಹಾಗೂ ಆರ್ಥಿಕ ಭದ್ರತೆಗಾಗಿ, ವಿಭಿನ್ನ ಸಂಸ್ಕೃತಿ ಉಳ್ಳಂತಹ ಭಾರತವು ಛಿದ್ರಗೊಳ್ಳದೇ ಐಕ್ಯತೆಯನ್ನು ಸಾಧಿಸಲು ಕೇಂದ್ರ ಸರ್ಕಾರದ ಬಲಾಢ್ಯತೆಯೂ ಅತ್ಯಂತ ಅವಶ್ಯಕವಾಗಿದೆ ಎಂದಿದ್ದಾರೆ. ಅಂದರೆ, ಬಾಹ್ಯ ಆಕ್ರಮಣವನ್ನು ಎದುರಿಸಲು ರಾಜ್ಯಗಳಲ್ಲಿ ಸಂಘಟಿತ ಮನೋಭಾವನೆಯೂ ಬೆಳೆಸಲು ಕೇಂದ್ರ ಸರ್ಕಾರದ ಬಲಿಷ್ಠತೆ ಅತ್ಯಂತ ಅವಶ್ಯಕವಾಗಿದೆ.

ಭಾರತ ಸಂವಿಧಾನದ ರಚನಾ ಸಭೆಯ ಸದಸ್ಯರಲ್ಲಿ ಒಬ್ಬರಾಗಿದ್ದ ಎಸ್. ನಾಗಪ್ಪ ಅವರು ಬಲಿಷ್ಠ ಕೇಂದ್ರ ಸರ್ಕಾರವನ್ನು ಕುರಿತು, "ಬಲವಾದ ಕೇಂದ್ರವಿರಬೇಕೆಂದು ಹೇಳುವುದರಲ್ಲಿ ನಾನೂ ಕೂಡ ಒಬ್ಬ. ವಿಶೇಷವಾಗಿ, ಈಗಷ್ಟೇ ಸ್ವಾತಂತ್ರ್ಯವನ್ನು ಗಳಿಸಿರುವುದರಿಂದ ಅದರ ಅಗತ್ಯ ಹೆಚ್ಚು. ಅದರ ಕ್ರೋಢಿಕರಣ ಎಲ್ಲ ಕಾಲಕ್ಕೂ ಭದ್ರವಾಗಿ ಉಳಿಸಿಕೊಳ್ಳಲು ನಮಗೆ ಸಾಕಷ್ಟು ಸಮಯಬೇಕು. ಈಗಾಗಲೇ ನಾವು ಅನೇಕ ವಿಧಗಳಿಂದ ಮತೀಯವಾಗಿ, ಧಾರ್ಮಿಕ ಆಧಾರಗಳಿಂದ ಬೇರೆ ಬೇರೆಯಾಗಿದ್ದೇವೆ. ಈಗ ಪ್ರಾಂತಗಳ ಆಧಾರದಿಂದ ಮತ್ತೇ ಬೇರೆ ಬೇರೆಯಾಗಿ ವಿಭಜಿತವಾಗುವುದು ಬೇಡ. ಎಲ್ಲಾ ಪ್ರಾಂತಗಳನ್ನು

ಒಟ್ಟುಗೂಡಿಸಿ ಐಕ್ಯತೆಯನ್ನು ಮೂಡಿಸಲು ಒಟ್ಟಿನಲ್ಲಿ ದೇಶದ ಹಿತಾಸಕ್ತಿಯಿಂದ ಪ್ರಬಲವಾದ ಕೇಂದ್ರವಿರುವುದು ಅವಶ್ಯಕ" ಎಂದಿದ್ದಾರೆ. ಆದ್ದರಿಂದ ಇವರು ಕೂಡ ಅಂಬೇಡ್ಕರ್ ಅವರು ಹೊಂದಿರುವಂತಹ ದೃಷ್ಟಿಕೋನವನ್ನೇ ಹೊಂದಿದ್ದಾರೆ.

**ಗ್ರಂಥಸೂಚಿ**


- **ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು,** ಸಂಪುಟ–13, 2015
- ದುರ್ಗಾದಾಸ್ ಬಸು, **ಭಾರತೀಯ ಸಂವಿಧಾನದ ಪರಿಚಯ,** 2020
- ಪೈಲಿ.ಎಂವಿ, **ಭಾರತೀಯ ಸಂವಿಧಾನ,** 1986
- ರಾಜಶೇಖರ.ಎಚ್.ಎಂ, **ಭಾರತ ಸರ್ಕಾರ ಮತ್ತು ರಾಜಕೀಯ,** 2024
- ಪುನ್ನಪ್ಪ.ಎಸ್ ಮಾಳ್ಗೆ, **ಬಸವೇಶ್ವರ ಮತ್ತು ಅಂಬೇಡ್ಕರ್ ಅವರ ರಾಜಕೀಯ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ,** 2005
- **Dr.Babashab Ambedkar Writings and Speeches,** Vol.13, 2014
- Bhagawan Das, **Thus Spoke Ambedkar,** Vol.2, 1968
- **Constituent Assembly Debates,** Vol.7, 1948